# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 867 |
| ಸದಸ್ಯರ ಹೆಸರು | : | ಶ್ರೀ.ವೈ.ಎಂ.ಸತೀಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 21.09.2022 |
| ಉತ್ತರಿಸುವ ಸಚಿವರು | : | ಪಶುಸಂಗೋಪನೆ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಗಳಲ್ಲಿ, ಪಶುಸಂಗೋಪನಾ ಇಲಾಖೆಯಲ್ಲಿ ಒಟ್ಟು ಮಂಜೂರಾದ ಹಾಗೂ ಹಾಲಿ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳ ಸಂಖ್ಯೆ ಎಷ್ಟು; (ಹುದ್ದೆಗಳವಾರು ಜಿಲ್ಲಾವಾರು ಮಾಹಿತಿ ನೀಡುವುದು) | ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಗಳಲ್ಲಿ ಪಶುಸಂಗೋಪನಾ ಇಲಾಖೆಯಲ್ಲಿ ಮಂಜೂರಾದ, ಭರ್ತಿಯಾಗಿರುವ ಮತ್ತು ಖಾಲಿ ಇರುವ ವಿವಿಧ ವೃಂದಗಳ ಹುದ್ದೆಗಳ ಜಿಲ್ಲಾವಾರು ವಿವರವನ್ನು <u>ಅನುಬಂಧ</u> ರಲ್ಲಿ ನೀಡಲಾಗಿದೆ. |
| ಆ) | ಇಲಾಖೆಯಲ್ಲಿ ಪಶುವೈದ್ಯರನ್ನು, ಬೇರೆ ಇಲಾಖೆಯ ಅಧಿಕಾರಿಗಳ ಹುದ್ದೆಗೆ ನಿಯೋಜನೆ ಮೇರೆಗೆ ಕಳುಹಿಸುತ್ತಿರುವುದರಿಂದ, ವೈದ್ಯರುಗಳ ಸಂಖ್ಯೆ ಕಡಿಮೆಯಾಗಿದೆ ಎಂದು ತಿಳಿದು ಬಂದಿದ್ದು, ನಿಯೋಜನೆ ಮೇರೆಗೆ ತೆರಳಿದ ವೈದ್ಯರುಗಳನ್ನು ವಾಪಾಸ್ ಮಾತೃ ಇಲಾಖೆಗೆ ಕರೆಸಿ ಖಾಲಿ ಇರುವ ವೈದ್ಯರುಗಳ ಹುದ್ದೆಗೆ ನೇಮಕ ಮಾಡಲು ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು ಇದನ್ನು ಯಾವ ಕಾಲಮಿತಿಯೊಳಗೆ ಮಾಡಲಾಗುವುದು; (ವಿವರ ನೀಡುವುದು) | ಸರ್ಕಾರದ ಆದೇಶ ಸಂಖ್ಯೆ: ಪಸಂಮೀ ಇ-71 ಪಸಸೇ 2021, ದಿನಾಂಕ:06.07.2021 ರಲ್ಲಿ ಪಶುಪಾಲನಾ ಮತ್ತು ಪಶುವೈದಯ ಸೇವಾ ಇಲಾಖೆಯಲ್ಲಿ ನೇಮಕಾತಿ ಹೊಂದಿ ಅನ್ಯ ಸೇವೆ ಮೇಲೆ ಬೇರೆ ಇಲಾಖೆಗಳಲ್ಲಿ / ನಿಗಮ /ಮಂಡಳಿ ಮತ್ತು ಇತರೆ ಸಂಸ್ಥೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಎಲ್ಲಾ ವೃಂದದ ಪಶುವೈದ್ಯಾಧಿಕಾರಿಗಳು ಮತ್ತು ಸಿಬ್ಬಂಧಿಗಳ ಸೇವೆಯನ್ನು ಮಾತೃ ಇಲಾಖೆಗೆ ಹಿಂಪಡೆಯಲು ಆದೇಶಿಸಲಾಗಿದೆ ಹಾಗೂ ಆಯುಕ್ತರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ ಈ ಸಂಬಂಧ ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚಿಸಲಾಗಿದೆ.<br><br>ನಿಯೋಜನೆ ಮೇಲೆ ಮುಂದುವರೆದಿರುವ ಅಧಿಕಾರಿಯನ್ನು ಕೂಡಲೇ ಪದಮುಕ್ತಗೊಳಿಸಲು ಸಮಾಜ ಕಲ್ಯಾಣ ಇಲಾಖೆಯನ್ನು ದಿನಾಂಕ:06.09.2021ರ ಹಾಗೂ 18.11.2021ರ ಅ.ಸ ಪತ್ರಗಳಲ್ಲಿ ಕೋರಲಾಗಿರುತ್ತದೆ. |

| | | |
|---|---|---|
| | | ನಿಯೋಜನೆ ಮೇರೆಗೆ ಡಾ:ಪರಮೇಶಿ ಎಲೇದಹಳ್ಳಿ, ಹಿರಿಯ ಪಶುವೈದ್ಯಾಧಿಕಾರಿ, ಕರ್ನಾಟಕ ಮಹರ್ಷಿ ವಾಲ್ಮಿಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ಇಲ್ಲಿ ಕಾರ್ಯ ನಿರ್ವಹಿಸುತ್ತಿರುವ ಇವರನ್ನು ಕೂಡಲೇ ಮಾತೃ ಇಲಾಖೆಗೆ ವರದಿ ಮಾಡಿಕೊಳ್ಳುವಂತೆ ಹಾಗೂ ಒಂದು ವೇಳೆ ಮಾತೃ ಇಲಾಖೆಗೆ ಹಾಜರಾಗದಿದ್ದಲ್ಲಿ ಶಿಸ್ತು ಕ್ರಮ ಜರುಗಿಸುವ ಬಗ್ಗೆ ದಿ:06-09-2021 ರ ಪತ್ರದಲ್ಲಿ ಆಯುಕ್ತರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ ಸೂಚಿಸಲಾಗಿತ್ತು.<br><br>ಸದರಿಯವರು ಮಾತೃ ಇಲಾಖೆಗೆ ಹಾಜರಾಗದೇ ಇರುವುದರಿಂದ ದಿನಾಂಕ:04-12 2021 ಮತ್ತು 29-12-2021 ರಂತೆ ಎರಡು ಬಾರಿ ಕಾರಣ ಕೇಳಿ ನೋಟೀಸ್ ಜಾರಿ ಮಾಡಲಾಗಿರುತ್ತದೆ.<br><br>ಸದರಿ ನೋಟೀಸಿಗೆ ಅಧಿಕಾರಿಯವರಿಂದ ದಿನಾಂಕ:05.01.2022ರಂದು ಸ್ವೀಕೃತವಾದ ಸಮಜಾಯಿಷಿಯನ್ನು ಒಪ್ಪದೇ, ಮಾತೃ ಇಲಾಖೆಗೆ ಇದುವರೆವಿಗೂ ಹಾಜರಾಗದೇ ಇರುವುದನ್ನು ಗಮನಿಸಿ ಸದರಿ ಹಿರಿಯ ಪಶುವೈದ್ಯಾಧಿಕಾರಿ ಇವರಿಗೆ ಪಶು ಆಸ್ಪತ್ರೆ, ರಟ್ಟೆಹಳ್ಳಿ, ರಟ್ಟೆಹಳ್ಳಿ ತಾಲ್ಲೂಕು, ಹಾವೇರಿ ಜಿಲ್ಲೆ ಇಲ್ಲಿಗೆ ಸರ್ಕಾರದ ಅಧಿಸೂಚನೆ ಸಂಖ್ಯೆ: ಪಸಂಮೀ ಇ-194 ಪಸಸೇ 2021, ದಿನಾಂಕ:19.02.2022 ರಲ್ಲಿ ಸ್ಥಳ ನಿಯುಕ್ತಿಗೊಳಿಸಿ, 15 ದಿನಗಳ ಒಳಗಾಗಿ ನಿಯುಕ್ತಿಗೊಳಿಸಿರುವ ಸ್ಥಳದಲ್ಲಿ ಕೂಡಲೇ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳುವುದು ಇಲ್ಲವಾದ್ದಲ್ಲಿ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) 1957ರನ್ವಯ ಶಿಸ್ತು ಕ್ರಮ ಕೈಗೊಳ್ಳಲಾಗುವುದೆಂದು ಸೂಚಿಸಲಾಗಿತ್ತು.<br><br>ಆದರೆ, ಈ ಅಧಿಕಾರಿಯು ಸ್ಥಳ ನಿಯುಕ್ತಿ ಮಾಡಿದ ಸ್ಥಳದಲ್ಲಿ ವರದಿ ಮಾಡಿಕೊಂಡಿಲ್ಲವಾದ್ದರಿಂದ, ಇವರ ವಿರುದ್ಧ ಅಗತ್ಯ ಕ್ರಮ ಜರುಗಿಸಲು ಪರಿಶೀಲಿಸಲಾಗುತ್ತಿದೆ. |

| | | |
|---|---|---|
| | | ಕರ್ತವ್ಯಕ್ಕೆ ವರದಿ ಮಾಡಿಕೊಳ್ಳಲು ಸೂಚಿಸಲಾಗಿದೆ. ಈವರೆಗೂ ಸದರಿಯವರು ನಿಯೋಜನೆಯಿಂದ ಮಾತ್ರ ಇಲಾಖೆಗೆ ಹಾಜರಾಗದೇ ಇರುವುದರಿಂದ ಇವರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲು ಕ್ರಮವಹಿಸಲಾಗುತ್ತಿದೆ. |
| ಇ) | ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಗಳಲ್ಲಿ, ಪಶು . ಸಂಗೋಪನೆ ಇಲಾಖೆಯಲ್ಲಿ ಖಾಲಿಯಿರುವ ಹುದ್ದೆಗಳನ್ನು ಮುಖ್ಯವಾಗಿ ಪಶುವೈದ್ಯರನ್ನು ನೇಮಕ ಮಾಡಲು ಸರ್ಕಾರದ ಕ್ರಮಗಳೇನು; ಯಾವ ಕಾಲಮಿತಿಯೊಳಗೆ ನೇಮಕ ಮಾಡಲಾಗುವುದು (ವಿವರ ನೀಡುವುದು) | ಪ್ರಸ್ತುತ ರಾಜ್ಯದಲ್ಲಿ 400 ಪಶು ವೈದ್ಯಾಧಿಕಾರಿಗಳ ಹುದ್ದೆಗಳನ್ನು ಭರ್ತಿ ಮಾಡುವ ನೇಮಕಾತಿ ಪ್ರಕ್ರಿಯೆ ಪ್ರಗತಿಯಲ್ಲಿದ್ದು, ನೇಮಕಾತಿ ಆದೇಶ ನೀಡುವ ಸಮಯದಲ್ಲಿ ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಗಳಲ್ಲಿ ಖಾಲಿ ಇರುವ ಪಶುವೈದ್ಯಾಧಿಕಾರಿಗಳ ಹುದ್ದೆಗಳನ್ನು ಆದ್ಯತೆ ಮತ್ತು ಅಗತ್ಯತೆ ಮೇರೆಗೆ ಭರ್ತಿ ಮಾಡಲು ಕ್ರಮವಹಿಸಲಾಗುವುದು. |

**ಸಂ: ಪಸಂಮೀ ಇ-159 ಪಸಸೇ 2022**

(ಪ್ರಭು.ಬಿ.ಚವ್ಹಾಣ್)
ಪಶುಸಂಗೋಪನೆ ಸಚಿವರು

# ಅನುಬಂಧ

## ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ,ಬಳ್ಳಾರಿ

| ಕ್ರ. ಸಂ | ಹುದ್ದೆಗಳ ವಿವರ | ಒಟ್ಟು | | |
|---|---|---|---|---|
| | | ಮಂ | ಭ | ಖಾ |
| 1 | ಉಪನಿರ್ದೇಶಕರು (ಆಡಳಿತ) | 1 | 1 | 0 |
| 2 | ಉಪನಿರ್ದೇಶಕರು (ಪಾಲಿ-ಕ್ಲಿನಿಕ್) | 1 | 1 | 0 |
| 3 | ಸಹಾಯಕ ನಿರ್ದೇಶಕರು/ಮುಖ್ಯ ಪಶುವೈದ್ಯಾಧಿಕಾರಿಗಳು (ಆಡಳಿತ) | 4 | 0 | 4 |
| 4 | ಮುಖ್ಯ ಪಶುವೈದ್ಯಾಧಿಕಾರಿಗಳು | 9 | 5 | 4 |
| 5 | ಮುಖ್ಯ/ಹಿರಿಯ ಪಶುವೈದ್ಯಾಧಿಕಾರಿಗಳು | 8 | 0 | 8 |
| 6 | ಪಶುವೈದ್ಯಾಧಿಕಾರಿಗಳು | 32 | 7 | 25 |
| 7 | ಜಾನುವಾರು ಅಭಿವೃದ್ಧಿ ಅಧಿಕಾರಿ | 4 | 1 | 3 |
| 8 | ಸಹಾಯಕ ಆಡಳಿತ ಅಧಿಕಾರಿ | 1 | 1 | 0 |
| 9 | ಜಾನುವಾರು ಅಧಿಕಾರಿ | 9 | 4 | 5 |
| 10 | ಹಿರಿಯ ಪಶುವೈದ್ಯಕೀಯ ಪರೀಕ್ಷಕರು | 13 | 12 | 1 |
| 11 | ಪಶುವೈದ್ಯಕೀಯ ಪರೀಕ್ಷಕರು | 32 | 12 | 20 |
| 12 | ಕಿರಿಯ ಪಶುವೈದ್ಯಕೀಯ ಪರೀಕ್ಷಕರು | 20 | 10 | 10 |
| 13 | ಲ್ಯಾಬ್ ಟೆಕ್ನೀಷಿಯನ್ | 1 | 0 | 1 |
| 14 | ಅಧೀಕ್ಷಕರು | 2 | 2 | 0 |
| 15 | ಪ್ರಥಮ ದರ್ಜೆ ಸಹಾಯಕರು | 4 | 4 | 0 |
| 16 | ದ್ವಿತೀಯ ದರ್ಜೆ ಸಹಾಯಕರು | 4 | 4 | 0 |
| 17 | ಬೆರಳಚ್ಚುಗಾರರು | 2 | 0 | 2 |
| 18 | ವಾಹನಚಾಲಕರು | 5 | 2 | 3 |
| 19 | "ಡಿ" ದರ್ಜೆ ನೌಕರರು | 107 | 27 | 80 |
| | ಒಟ್ಟು | 259 | 93 | 166 |

ನಿರ್ದೇಶಕರು

| | ಅನುಬಂಧ ಪ್ರಶ್ನೆ ಸಂ:867 | | | |
|---|---|---|---|---|
| ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ, ವಿಜಯನಗರ | | | | |
| ಕ್ರ. ಸಂ | ಹುದ್ದೆಗಳ ವಿವರ | ಒಟ್ಟು | | |
| | | ಮಂ | ಭ | ಖಾ |
| 1 | ಉಪನಿರ್ದೇಶಕರು | 0 | 0 | 0 |
| 2 | ಉಪನಿರ್ದೇಶಕರು (ಪಾಲಿಕ್ಲಿನಿಕ್) | 0 | 0 | 0 |
| 3 | ಸಹಾಯಕ ನಿರ್ದೇಶಕರು/ಮುಖ್ಯ ಪಶುವೈದ್ಯಾಧಿಕಾರಿಗಳು (ಆಡಳಿತ) | 5 | 3 | 2 |
| 4 | ಮುಖ್ಯ ಪಶುವೈದ್ಯಾಧಿಕಾರಿಗಳು & (ವಿಷಯ ತಜ್ಞರು 01 ಹುದ್ದೆ) | 10 | 5 | 5 |
| 5 | ಮುಖ್ಯ/ಹಿರಿಯ ಪಶುವೈದ್ಯಾಧಿಕಾರಿಗಳು | 14 | 4 | 10 |
| 6 | ಪಶುವೈದ್ಯಾಧಿಕಾರಿಗಳು | 55 | 33 | 22 |
| 8 | ಜಾನುವಾರು ಅಭಿವೃದ್ಧಿ ಅಧಿಕಾರಿ | 5 | 3 | 2 |
| 8 | ಸಹಾಯಕ ಆಡಳಿತ ಅಧಿಕಾರಿ | 0 | 0 | 0 |
| 9 | ಜಾನುವಾರು ಅಧಿಕಾರಿ | 14 | 7 | 7 |
| 10 | ಹಿರಿಯ ಪಶುವೈದ್ಯಕೀಯ ಪರೀಕ್ಷಕರು | 30 | 18 | 12 |
| 11 | ಪಶುವೈದ್ಯಕೀಯ ಪರೀಕ್ಷಕರು | 47 | 13 | 34 |
| 12 | ಪಶುವೈದ್ಯಕೀಯ ಸಹಾಯಕರು | 39 | 18 | 21 |
| 13 | ಲ್ಯಾಬ್ ಟೆಕ್ನೀಷಿಯನ್ | 0 | 0 | 0 |
| 14 | ಅಧೀಕ್ಷಕರು | 0 | 0 | 0 |
| 15 | ಪ್ರಥಮ ದರ್ಜೆ ಸಹಾಯಕರು | 0 | 0 | 0 |
| 16 | ದ್ವಿತೀಯ ದರ್ಜೆ ಸಹಾಯಕರು | 5 | 5 | 0 |
| 17 | ಬೆರಳಚ್ಚುಗಾರರು | 0 | 0 | 0 |
| 18 | ವಾಹನಚಾಲಕರು | 5 | 1 | 4 |
| 19 | ಕೃಷಿ ಸಹಾಯಕರು | 0 | 0 | 0 |
| 20 | "ಡಿ" ದರ್ಜೆ ನೌಕರರು | 159 | 53 | 106 |
| ಒಟ್ಟು | | 388 | 163 | 225 |

ನಿರ್ದೇಶಕರು